


ಬೀದಿಯಲ್ಲಿ ಹೆಂಡತಿಯೊಂದಿಗೆ ಹೋಗುತ್ತಿದ್ದ ಗುಂಡ. ಒಂದೆಡೆ ನಿಂತಿದ್ದ ಕತ್ತೆಯನ್ನು ಹೆಂಡತಿಗೆ ತೋರಿಸಿ, 'ನಿನ್ನ ಸಂಬಂಧಿ ಅಲ್ಲಿ ನಿಂತಿದ್ದಾರೆ, ಮಾತನಾಡಿಸುವುದಿಲ್ಲವೆ?' ಎಂದು ಕೇಳಿದ.

'ಹೌದಲ್ಲ!' ಹೆಂಡತಿ ಕತ್ತೆಯ ಬಳಿಗೆ ಹೋಗಿ ಬಾಗಿ ಕೇಳಿದಳು, 'ಹಳ್ಳಿಯಿಂದ ಮಗನನ್ನು ಕಾಣಲು ಬಂದಿರಾ ಮಾವನವರೇ, ಹೇಗಿದ್ದೀರಿ, ಅತ್ತೆಯವರು ಕುಶಲವೇ?'

★★★

ರೈಲಿಗಾಗಿ ಕಾದು ಬೇಸತ್ತ ತಿಮ್ಮ ಸ್ಟೇಷನ್ ಮಾಸ್ಟರ್ ಬಳಿಗೆ ಹೋಗಿ ಸಿಟ್ಟಿನಿಂದ ಕೇಳಿದ: ರೈಲುಗಳು ಇಷ್ಟು ತಡವಾಗಿ ಬರುತ್ತಿರುವಾಗ ವೇಳಾಪಟ್ಟಿಯ ಫಲಕವನ್ನು ಯಾವ ಪುರುಷಾರ್ಥಕ್ಕೆ ತೂಗಾಡಿಸುತ್ತೀರಿ? ಅದನ್ನು ಕಿತ್ತು ಹಾಕಬಹುದಲ್ಲವೆ?

ಸ್ಟೇಷನ್ ಮಾಸ್ಟರ್: ನಾವು ಫಲಕವನ್ನು ತೆಗೆದು ಹಾಕಬಹುದು. ಆದರೆ ರೈಲುಗಳು ತಡವಾಗಿ ಬರುತ್ತಿವೆಯೆಂದು ನಿಮಗೆ ತಿಳಿಯುವುದಾದರೂ ಹೇಗೆ?

★★★

ಒಬ್ಬ ವಾಸ್ತುಶಿಲ್ಪಿ ತಾನು ಎಲ್ಲರಿಗಿಂತ ಕಡಿಮೆ ವೆಚ್ಚದಲ್ಲಿ ಅದೇ ಅಳತೆಯ ಮನೆಯನ್ನು ನಿರ್ಮಿಸಿ ಕೊಡಬಲ್ಲೆ ಎಂದು ಸವಾಲು ಹಾಕಿದ. ನಗರಸಭೆಯ ಅಧಿಕಾರಿಗಳು ಪ್ರಾಯೋಗಿಕವಾಗಿ ಒಂದು ಮನೆಯನ್ನು ನಿರ್ಮಿಸಿಕೊಡಲು ಹೇಳಿದರು. ಇದನ್ನು ಸವಾಲಾಗಿ ಸ್ವೀಕರಿಸಿ ಆತ ಮನೆಯನ್ನು ನಿರ್ಮಿಸಿದ. ಅಧಿಕಾರಿಗಳು ಅದನ್ನು ಪರಿಶೀಲಿಸಿ ಕೇಳಿದರು:

ಈ ಮನೆಯಲ್ಲಿ ಏನು ಉಳಿತಾಯವಾಗಿದೆ ಎಂಬುದನ್ನು ವಿವರಿಸಬಹುದೆ?

ಕೆಲಸಗಾರನೊಬ್ಬ ಒಂದು ಇಟ್ಟಿಗೆಯನ್ನು ತಂದು ಅಧಿಕಾರಿಗಳ ಮುಂದಿರಿಸಿ ಹೇಳಿದ, 'ನಮ್ಮ ವಾಸ್ತುಶಿಲ್ಪಿಗಳ ಸತತ ಸಂಶೋಧನೆ ಮತ್ತು ಪರಿಶ್ರಮದ ಫಲವಾಗಿ ಈ ಮನೆಯ ನಿರ್ಮಾಣದಲ್ಲಿ ಈ ಒಂದು ಇಟ್ಟಿಗೆಯ ಉಳಿತಾಯ ಸಾಧ್ಯವಾಗಿದೆ'.

★★★

ಮಗುವೊಂದು ತಾನು ಅಂದು ಶಾಲೆಗೆ ಹೋಗುವುದೇ ಇಲ್ಲ ಎಂದು ಹಟ ಹಿಡಿಯಿತು. ಅಮ್ಮ ಕಾರಣ ಕೇಳಿದಳು.

ಮಗು: ಶಾಲೆಯಲ್ಲಿ ಸಾಕುತ್ತಿದ್ದ ಒಂದು ಕೋಳಿ ರೋಗ ಬಂದು ಮೊನ್ನೆ ಸತ್ತುಹೋಯಿತು. ಮರುದಿನ ಬಿಸಿಯೂಟಕ್ಕೆ ಅದರದೇ ಸಾರು ಮಾಡಿದರು. ಅದರ ಮಾರನೆಯ ದಿವಸ ಹಂದಿ ಸತ್ತಿತು. ನಮಗೆಲ್ಲ ಊಟಕ್ಕೆ ಅದನ್ನೇ ಬಡಿಸಿದರು.

ಅಮ್ಮ: ಅದು ನಿನ್ನೆ ಮೊನ್ನೆಗೇ ಮುಗಿಯಿತು ತಾನೆ? ಇವತ್ತು ಚಿಂತೆ ಏನಿದೆ, ಶಾಲೆಗೆ ಹೋಗಬಹುದಲ್ಲವೆ?

ಮಗು: ಇವತ್ತು ಚಿಕನ್‌ಗುನ್ಯ ಬಂದು ನಮ್ಮ ಗಣಿತ ಶಿಕ್ಷಕರು ತೀರಿಕೊಂಡರು ಅಂತ ಸುದ್ದಿ ಬಂದಿದೆ ಅಮ್ಮ!

**(ಸಂಗ್ರಹ) ಪರಾಶಾ**

ಡಾಕ್ಟರ್: (ಶಾಪಿಗೆ ಬಂದ ಉಮೇಶನಿಗೆ) ಬನ್ನಿ ಉಮೇಶ್... ಏನ್ ಸಮಾಚಾರ?

ಉಮೇಶ್: ಸ್ವಲ್ಪ ಹುಷಾರಿಲ್ಲಾ ಡಾಕ್ಟ್ರೇ.. ಯಾಕೋ ತಲೆ ಭಾರ..

ಡಾಕ್ಟರ್: ಡ್ರಿಂಕ್ಸ್ ಮಾಡ್ತೀರಾ?

ಉಮೇಶ್: ಹೂಂ, ಆದ್ರೆ ಗ್ಲಾಸ್ ತಂದಿಲ್ಲಾ ಡಾಕ್ಟ್ರೇ, ನಿಮ್ ಗ್ಲಾಸ್‌ನಲ್ಲೇ ಸ್ವಲ್ಪ ಹಾಕ್ಕೊಡಿ.

★★★

ಚಳಿಯಿಂದ ನಡುಗುತ್ತಿದ್ದ ಎರಡು ಗಂಡು ದೆವ್ವಗಳು ಸ್ಮಶಾನದಲ್ಲಿ ಅಮಾವಾಸ್ಯೆಯ ದಿವಸ ಭೇಟಿಯಾದವು.

ಮೊದಲನೇ ದೆವ್ವ: ನೀ ಹ್ಯಾಗೆ ಸತ್ತಿದ್ದು?

ಎರಡನೇ ದೆವ್ವ: ನಾನು ಬ್ಯಾಂಕಿನಲ್ಲಿ ಕೆಲಸಕ್ಕಿದ್ದೆ. ನನ್ನ ಹೆಂಡತಿ ಶೀಲಾಗೆ ಅಕ್ರಮ ಸಂಬಂಧ ಇದೆಯೇನೋ ಅನ್ನುವ ಅನುಮಾನವಿತ್ತು. ಒಂದು ದಿನ ಅವಳಿಗೆ ತಿಳಿಯದಂತೆ ಬೇಗ ಮನೆಗೆ ಬಂದೆ. ಬಾಗಿಲು ಬಡಿದೆ' ಆಕೆ ತೆಗೆದಳು. ಇಡೀ ಮನೆ ಹುಡುಕಿದರೂ ಯಾರೂ ಇಲ್ಲ. ಇಂತಹ ಚಿನ್ನದಂತಹ ಹೆಂಡತಿಯ ಮೇಲೆ ವೃಥಾ ಅನುಮಾನಪಟ್ಟೆನಲ್ಲ ಅಂತ ನದಿಗೆ ಬಿದ್ದು ಸತ್ತೆ... ನಿನ್ ಕತೆ ಏನು..?'

ಮೊದಲ ದೆವ್ವ: ಅಯ್ಯೋ ದಡ್ಡ, ನೀ ನಿಮ್ಮನೆ ಫ್ರಿಡ್ಜ್ ತೆಗೆದು ನೋಡಿದ್ರೆ ಇಬ್ಬರೂ ಉಳೀತಿದ್ವಲ್ಲೋ.

★★★

ಮಂಜು: ಸಾರಿ ಕಣೇ.. ನಾನು ನಿನ್ನನ್ನು ಮದುವೆ ಆಗಕ್ಕಾಗಲ್ಲ'.

ಶೀಲಾ: ಓಹ್ ಗಾಡ್..ಯಾಕೆ?

ಮಂಜು: ಮನೆಯಲ್ಲಿ ಒಪ್ತಾ ಇಲ್ಲಾ..

ಶೀಲಾ: ನಿನ್ನ ಮನೇಲೀ ಯಾರೆಲ್ಲಾ ಇದ್ದಾರೆ. ಅವರನ್ನು ಒಪ್ಪಿಸೊ ಜವಾಬ್ದಾರಿ ನಂದೇ...

ಮಂಜು: ಅಮ್ಮ, ನನ್ನ ಹೆಂಡತಿ, ಮೂರು ಮಕ್ಕಳು..

★★★

ತಿಮ್ಮ: ಜಡ್ಜ್ ಸಾಹೇಬರೇ ನನಗೆ ಹೇಗಾದರೂ ಮಾಡಿ ಡೈವರ್ಸ್ ಕೊಡಿಸಿ.

ನ್ಯಾಯಾಧೀಶ: ಏನಪ್ಪ ನಿಮ್ಮಿಬ್ಬರ ನಡುವೆ ಅಂತಹ ಸಮಸ್ಯೆ?

ತಿಮ್ಮ: ನನ್ನ ಹೆಂಡತಿ ಶೀಲಾ ನನ್ನತ್ರ ಬೆಳ್ಳುಳ್ಳಿ ಸುಲಿಸ್ತಾಳೆ, ಈರುಳ್ಳಿ ಕತ್ತರಿಸ್ತಾಳೆ, ಪಾತ್ರೆ ತೊಳೆಸುತ್ತಾಳೆ...

ನ್ಯಾಯಾಧೀಶ: ಛೇ ! ಇದರಲ್ಲಿ ಏನು ಕಷ್ಟ? ಬೆಳ್ಳುಳ್ಳಿ ಸ್ವಲ್ಪ ಬಿಸಿ ಮಾಡಿದರೆ ಸಿಪ್ಪೆ ಸುಲಭವಾಗಿ ಬಿಚ್ಚುತ್ತೆ, ಈರುಳ್ಳಿ ಕತ್ತರಿಸುವ ಮುಂಚೆ ಫ್ರಿಡ್ಜ್‌ನಲ್ಲಿ ಇಟ್ಟರೆ ಕಣ್ಣು ಉರಿಯೋದಿಲ್ಲ, ಮತ್ತೆ ಪಾತ್ರೆಗಳನ್ನು ಹದಿನೈದು ನಿಮಿಷ ನೀರಲ್ಲಿ ನೆನೆಸಿದರೆ ಮುಸುರೆ ಸುಲಭವಾಗಿ ಬಿಟ್ಟು ಪಾತ್ರೆ ಸುಲಭವಾಗಿ ತೊಳೆಯಬಹುದು. ಅಲ್ಲದೇ ಬಟ್ಟೆ ಕೂಡ ಅಷ್ಟೇ ಅವುಗಳನ್ನು ಸೋಪಿನ ಪುಡಿ ಹಾಕಿದ ಬಿಸಿನೀರಿನಲ್ಲಿ ಇಟ್ಟರೆ ಕೊಳೆ ಬೇಗನೆ ಹೋಗುತ್ತೆ...

ತಿಮ್ಮ: ಸಾಹೇಬರ ಸಾಕ ಬಿಡರಿ, ನಿಮ್ಮ ಪರಿಸ್ಥಿತಿ ನೋಡಿದರ ನಾನು ಅರಾಮ ಇದ್ದೀನಿ. ಕೇಸನ್ನು ವಾಪಸು ತಗೋತಿನಿ.

★★★

ಶೀಲಾ: ನಿಮ್ಮನ್ನ ನೋಡೋಕೆ ಡಾಕ್ಟರ್ ಬಂದಿದ್ದಾರೆ..

ಸಾಂಪ್ರ : ನನಗೆ ಮೈ ಹುಷಾರಿಲ್ಲ , ಅವರನ್ನ ನಾಳೆ ಬರೋಕೆ ಹೇಳು.

**(ಸಂಗ್ರಹ) ತೈರೊಳ್ಳಿ ಮಂಜುನಾಥ ಉಡುಪ**